271

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2018–19ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳು ನವ ನಗರೋತ್ಥಾನ ಯೋಜನೆಯಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿ "Drilling of Borewells, Installation of Pump and motors, Providing Pipeline and additional motor pumps and necessary accessories to existing borewells in ward no.06" ಕಾಮಗಾರಿಯ ರೂ.450.00 ಲಕ್ಷಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್‌ಗೆ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20–09–2019.
2. ಆಯುಕ್ತರು, ಬಿಬಿಎಂಪಿ ರವರ ಪತ್ರ ಸಂಖ್ಯೆ: ಆಯುಕ್ತರು/ಪಿ.ಆರ್/6076/2019–20, ದಿನಾಂಕ: 22–11–2019.
3. ದಿನಾಂಕ: 04–01–2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿ.
4. ಸರ್ಕಾರದ ಸಮ ಸಂಖ್ಯೆಯ ಪತ್ರ ದಿನಾಂಕ: 05–03–2020.
5. ಆಯುಕ್ತರು, ಬಿಬಿಎಂಪಿ ರವರ ಪತ್ರ ಸಂಖ್ಯೆ: ಆಯುಕ್ತರು/ಪಿ.ಆರ್(ಜಿ)/6076/2019–20, ದಿನಾಂಕ: 16–03–2020.
6. ದಿನಾಂಕ: 23–03–2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿ.

* * * * *

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 20–09–2019ರ ಆದೇಶದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2018–19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳಲು ಉದ್ದೇಶಿಸಿ, ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 01–02–2019 ರಂತೆ ಅನುಮೋದಿಸಿದ್ದ, "ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆ"ಯನ್ನು ರದ್ದುಪಡಿಸಿ ಪರ್ಯಾಯವಾಗಿ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾ ಯೋಜನೆಗೆ ಕೆಲವೊಂದು ಷರತ್ತುಗಳಿಗೆ ಒಳಪಟ್ಟು ಅನುಮೋದನೆಯನ್ನು ನೀಡಲಾಗಿದ್ದು, ಸದರಿ ಆದೇಶದ ಅನುಬಂಧ–5 ರ ಕ್ರಮ ಸಂಖ್ಯೆ:25 ರಲ್ಲಿನ Drilling of Borewells, Installation of Pump and motors, Providing Pipeline and additional motor pumps and necessary accessories to existing borewells in ward no.06" ಕಾಮಗಾರಿಗೆ ರೂ.4.50 ಕೋಟಿಗಳ ಅನುದಾನ ನಿಗಧಿಪಡಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 22–11–2019ರ ಪತ್ರದಲ್ಲಿ ಆಯುಕ್ತರು, ಬಿಬಿಎಂಪಿ ರವರು, ಸರ್ಕಾರವು 2018–19ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆಯಡಿಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: 375 ಎಂಎನ್‌ವೈ 2018, ದಿನಾಂಕ: 01–02–2019 ಅನುಬಂಧ–10ರ ಕ್ರಮ ಸಂಖ್ಯೆ 02 ರಲ್ಲಿನ ಕ್ರಿಯಾ ಯೋಜನೆಯಲ್ಲಿ "Development of works to be

..2/-

Scanned by TapScanner

undertaken around Solid Waste disposal/processing units to be established un future , Devanahalli, Hosakote, nelamangala, Magadi and Ramanagara Taluks" ರ ಕಾಮಗಾರಿಗಳಿಗೆ ರೂ 15000.00 ಲಕ್ಷಗಳ ಅನುದಾನ ನಿಗಧಿಪಡಿಸಲಾಗಿತ್ತು ಎಂದು ಆಯುಕ್ತರು ತಿಳಿಸಿರುತ್ತಾರೆ.

ಸರ್ಕಾರದ ಆದೇಶದ ಕ್ರಿಯಾ ಯೋಜನೆ ಅನುಬಂಧ–10ರ ಕ್ರಮ ಸಂಖ್ಯೆ 02 ರಲ್ಲಿ ಮಂಜೂರಾಗಿರುವ ಅನುದಾನದ ಪೈಕಿ ಸರ್ಕಾರದ ಆದೇಶ ಸಂಖ್ಯೆ: ನಅಇ 172 ಎಂ.ಎನ್.ವೈ 2019 ದಿನಾಂಕ:04–05–2019ರಲ್ಲಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಳ್ಳುವ ಹೊಸ ಬದಲಿ ಕಾಮಗಾರಿಗಳ ರೂ.10100.00 ಲಕ್ಷಗಳ ಕ್ರಿಯಾ ಯೋಜನೆಗೆ ಅನುಮೋದನೆಯನ್ನು ನೀಡಲಾಗಿತ್ತು. ದಿನಾಂಕ:04–05–2019ರ ಕ್ರಿಯಾ ಯೋಜನೆಯ ಕ್ರಮ ಸಂಖ್ಯೆ: 10 ರಲ್ಲಿ ಅನುಮೋದನೆಗೊಂಡಿರುವ Drilling of Borewells, Installation of Pump and motors, Providing Pipeline and additional motor pumps and necessary accessories to existing borewells in ward no.06 ಕಾಮಗಾರಿ ಅಂದಾಜು ವೆಚ್ಚ ರೂ.450.00 ಲಕ್ಷಗಳು ಮಂಜೂರಾಗಿರುತ್ತದೆ. ಅದರಂತೆ ಯಲಹಂಕ ವಲಯ ಯೋಜನಾ ವಿಭಾಗ ಕಛೇರಿಯಿಂದ ಟೆಂಡರ್ ಸಂಖ್ಯೆ: BBMP/YNK/EE(Projet)/TEND/04 /2019-20, Date:09–05–2019 ರಂತೆ ದ್ವಿಲಕೊಟೆ ಇ–ಪ್ರಕ್ಯೂರ್‌ಮೆಂಟ್ ಪದ್ದತಿಯಂತೆ ರೂ.402.00 ಲಕ್ಷಗಳಿಗೆ (ಟೆಂಡರ್‌ಗಿಟ್ಟ ಮೊತ್ತ) ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಸದರಿ ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ದಿನಾಂಕ:20–05–2019 ರಂದು ತೆರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ 1) M/s Sathya Borwell Cleaning ಮತ್ತು 2) M/s Rajalakshmi Rock Drillers ಈ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಈ ಇಬ್ಬರೂ ಬಿಡ್‌ದಾರರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆಂದು ಬಿಬಿಎಂಪಿ ಆಯುಕ್ತರು ತಿಳಿಸಿರುತ್ತಾರೆ.

ಬಿಡ್‌ದಾರರಾದ M/s Sathya Borwell Cleaning & M/s Rajalakshmi Rock Drillers ರವರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದರಿಂದ ದಿನಾಂಕ:20–07–2019ರಂದು ಆಯುಕ್ತರ ಅಧ್ಯಕ್ಷತೆಯ ತಾಂತ್ರಿಕ ಮೌಲ್ಯಮಾಪನ ಸಮಿತಿಯು ತಾಂತ್ರಿಕ ಬಿಡ್‌ಗೆ ಅನುಮೋದನೆ ಹಾಗೂ ಆರ್ಥಿಕ ಬಿಡ್‌ನ್ನು ತೆರೆಯಲು ಅನುಮೋದನೆ ನೀಡಿರುವಂತೆ ದಿನಾಂಕ:29–07–2019ರಂದು ತೆರೆಯಲಾಗಿರುತ್ತದೆ. ವಿವರಗಳು ಈ ಕೆಳಕಂಡಂತೆ ಇರುತ್ತದೆ ಎಂದು ಆಯುಕ್ತರು, ಬಿಬಿಎಂಪಿ ರವರು ತಿಳಿಸಿರುತ್ತಾರೆ.

ಕ್ರ ಸಂ	ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್ ಗಿಟ್ಟ ಮೊತ್ತ (ರೂಗಳಲ್ಲಿ)	ಪ್ರಸ್ತುತ 2019–20 ನೇ ಸಾಲಿನ ಪಿ.ಆರ್.ಇ.ಡಿ ದರಗಳಿಗೆ ಹೋಲಿಸಿದಾಗ ದಿ:02–05–2019	ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂಗಳಲ್ಲಿ)	ಟೆಂಡರ್ ಗಿಟ್ಟ ಮೊತ್ತ ದರಗಳಿಗೆ ಹೋಲಿಸಿದಾಗ	2019–20 ನೇ ಸಾಲಿನ ಪಿ.ಆರ್.ಇ.ಡಿ ದರಗಳಿಗೆ ಹೋಲಿಸಿದಾಗ ದಿ:02–05–2019
1	M/s Sathya Borwell Cleaning	450.00	40172815.20	42005251.98	47414023.20	(+)18.03%	(+)12.88%
2	M/s Rajalakshmi Rock Drillers				50751670.00	(+)26.33%	(+)20.82%

. . .3/-

Scanned by TapScanner

ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018 ದಿನಾಂಕ:01-02-2019ರಲ್ಲಿ "ಮಾನ್ಯ ಮುಖ್ಯಮಂತ್ರಿಗಳ ನವ ಬೆಂಗಳೂರು" ಯೋಜನೆಯನ್ನು ರದ್ದುಪಡಿಸಿ ಪರ್ಯಾಯವಾಗಿ ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018 ದಿನಾಂಕ:20-09-2019ರಲ್ಲಿ "ಮಾನ್ಯ ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದ್ದು, ಅನುಬಂಧ-05ರ ಕ್ರಮ ಸಂಖ್ಯೆ: 25ರಲ್ಲಿ ಈ ಕಾಮಗಾರಿಗೆ ರೂ.450.00 ಲಕ್ಷಗಳನ್ನು ನಿಗಧಿಪಡಿಸಲಾಗಿರುತ್ತದೆ. ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಎಲ್-1 ಗುತ್ತಿಗೆದಾರರೊಂದಿಗೆ ದರ ಸಂಧಾನದ ನಂತರ ದರಗಳ ವಿವರ ಈ ರೀತಿ ಇರುತ್ತದೆ.

ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್ ಗಿಟ್ಟ ಮೊತ್ತ (ರೂಗಳಲ್ಲಿ)	ಪ್ರಸ್ತುತ 2019-20 ನೇ ಸಾಲಿನ ಪಿ.ಆರ್.ಇ.ಡಿ ದರಗಳಿಗೆ ಹೋಲಿಸಿದಾಗ ದಿ:02-05-2019	ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂಗಳಲ್ಲಿ)	ಟೆಂಡರ್ ಗಿಟ್ಟ ಮೊತ್ತ ದರಗಳಿಗೆ ಹೋಲಿಸಿದಾಗ	2019-20 ನೇ ಸಾಲಿನ ಪಿ.ಆರ್.ಇ.ಡಿ ದರಗಳಿಗೆ ಹೋಲಿಸಿದಾಗ ದಿ:02-05-2019	ದರ ಸಂಧಾನದ ನಂತರ ಗುತ್ತಿಗೆದಾರರು ಒಪ್ಪಿರುವ ಮೊತ
M/s Sathya Borwell Cleaning	450.00	40172815.20	42005251.98	47414023.20	(+)18.03%	(+)12.88%	45764722 (8.95% Above)

ಎಲ್-1 ಗುತ್ತಿಗೆದಾರರಾದ M/s Sathya Borwell Cleaning ರವರು ನಮೂದಿಸಿರುವ ದರಗಳು ಕರ್ನಾಟಕ ಲೋಕೋಪಯೋಗಿ 2018-19ನೇ ಎಸ್.ಆರ್ ದರಪಟ್ಟಿ ಹಾಗೂ 2012-13ನೇ ಸಾಲಿನ ಪಿಆರ್‌ಇಡಿ ದರಪಟ್ಟಿಯ ದರಗಳಿಗೆ ಶೇ.18.03% ಹೆಚ್ಚು ಆಗಿರುತ್ತದೆ ಹಾಗೂ ದಿ:02-05-2019ರ 2019-20ನೇ ಸಾಲಿನ ಪಿ.ಆರ್.ಇ.ಡಿ ದರಪಟ್ಟಿಯ ಮತ್ತು ಕರ್ನಾಟಕ ಲೋಕೋಪಯೋಗಿ 2018-19ನೇ ಎಸ್.ಆರ್ ದರಪಟ್ಟಿ ದರಗಳಿಗೆ ಹೋಲಿಸಿದಾಗ ಶೇ.12.88% ಹೆಚ್ಚು ಆಗಿದ್ದು, ಮುಖ್ಯ ಅಭಿಯಂತರರು ಯಲಹಂಕ ವಲಯರವರು ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಿ ದರ ಸಂಧಾನದ ನಂತರ ರೂ.4,57,64,722.00 ಗಳಾಗಿದ್ದು ಪ್ರಸುತ್ತ ದರಗಳ ಪಟ್ಟಿಯ ಮೇಲೆ ಶೇ.8.95% ರಷ್ಟು ಹೆಚ್ಚುವರಿಯಾಗಿರುತ್ತದೆ. ದಿನಾಂಕ:22-11-2019 ರಂದು ನಡೆದ ಆರ್ಥಿಕ ಮೌಲ್ಯಮಾಪನ ಸಮಿತಿ ಸಭೆಯಲ್ಲಿ ಶೇ.5.00%ರಷ್ಟು ಹೆಚ್ಚುವರಿ ದರಗಳಿಗೆ ಸೀಮಿತಗೊಳಿಸಿ ಟೆಂಡರ್‌ಗೆ ಮಂಜೂರಾತಿ ನೀಡಲು ಸಮಿತಿಯಲ್ಲಿ ಶಿಫಾರಸ್ಸು ಮಾಡಲಾಗಿರುತ್ತದೆ.

ವಾರ್ಡ್ ನಂ.06, 110 ಹಳ್ಳಿಗಳ ವ್ಯಾಪ್ತಿಯಲ್ಲಿದ್ದು, ಕುಡಿಯುವ ನೀರನ್ನು ಕೊಳವೆ ಬಾವಿಗಳ ಮುಖಾಂತರವೇ ಪಾಲಿಕೆಯ ವತಿಯಿಂದ ಸರಬರಾಜು ಮಾಡಲಾಗುತ್ತಿದ್ದು, 2019ನೇ ಸಾಲಿನ ಬೇಸಿಗೆಯಲ್ಲಿ ಹಾಲಿ ಇರತಕ್ಕಂತಹ ಕೊಳವೆ ಬಾವಿಗಳಲ್ಲಿ ನೀರಿನ ಪ್ರಮಾಣವು ಕಡಿಮೆಯಾಗಿದ್ದು, ಕೆಲವು ಕೊಳವೆ ಬಾವಿಗಳು ಸಂಪೂರ್ಣವಾಗಿ ಬತ್ತಿ ಹೋಗಿರುವುದರಿಂದ ಕುಡಿಯುವ ನೀರಿಗಾಗಿ ತುಂಬಾ ಹಾಹಾಕಾರ ಉಂಟಾಗಿ ಸಾರ್ವಜನಿಕರಿಗೆ ಕುಡಿಯುವ ನೀರಿಗಾಗಿ ತುಂಬಾ ತೊಂದರೆಯಾಗಿರುತ್ತದೆ. ಸಾರ್ವಜನಿಕರ ಕುಡಿಯುವ ನೀರಿನ ಅಭಾವ ನೀಗಿಸಲು ಹಾಗೂ ಸಾರ್ವಜನಿಕರ ಸೇವಾ ಹಿತದೃಷ್ಟಿಯಿಂದ ಕೊಳವೆ ಬಾವಿಗಳನ್ನು ತುರ್ತಾಗಿ ಕೊರೆದು ಸಾರ್ವಜನಿಕರಿಗೆ ಕುಡಿಯುವ ನೀರನ್ನು ಒದಗಿಸಬೇಕಾಗಿರುವುದರಿಂದ ಅಂದಾಜು ಮೊತ್ತ ರೂ.450.00 ಲಕ್ಷಗಳ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಕಡಿಮೆ ಮೊತ್ತದ ಟೆಂಡರ್‌ದಾರರಾದ M/s Sathya Borwell Cleaning ರವರ ಟೆಂಡರ್‌ನ ರೂ.4,41,05,514.00 ಗಳಿಗೆ ಶೇ.5.00ರಷ್ಟು ಹೆಚ್ಚುವರಿ ದರಗಳಿಗೆ ಮಂಜೂರಾತಿ ನೀಡುವಂತೆ ಬಿಬಿಎಂಪಿ ಆಯುಕ್ತರು ಕೋರಿರುತ್ತಾರೆ.

...4/-

Scanned by TapScanner

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ: 04-01-2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ಮುಂದೆ ಬಿ.ಬಿ.ಎಂ.ಪಿ. ಆಯುಕ್ತರ ದಿನಾಂಕ: 22-11-2019ರ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು, ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ವಿಷಯವನ್ನು ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

"ವಿವರವಾದ ಚರ್ಚೆಯ ನಂತರ ವಿಷಯವನ್ನು ಮುಂದೂಡಿ ಯೋಜನೆಯ ಅಗತ್ಯತೆಯ ಬಗ್ಗೆ ಪರಿಶೀಲಿಸಿ ಅಗತ್ಯವಿದ್ದಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ. ಸಂಸ್ಥೆಯಿಂದ ಅನುಷ್ಠಾನಗೊಳಿಸುವಂತೆ ಪ್ರಸ್ತಾವನೆಯನ್ನು ಬಿ.ಡಬ್ಲ್ಯು.ಎಸ್.ಎಸ್.ಬಿ.,ಗೆ ಕಳುಹಿಸಲು ಆಯುಕ್ತರು ಕ್ರಮ ತೆಗೆದುಕೊಳ್ಳುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ದಿನಾಂಕ: 05-03-2020ರ ಸರ್ಕಾರದ ಪತ್ರದಲ್ಲಿ ದಿನಾಂಕ: 04-01-2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಬಿಬಿಎಂಪಿ ಆಯುಕ್ತರಿಗೆ ಪತ್ರ ಬರೆಯಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ದಿನಾಂಕ: 16.03.2020ರ ಪತ್ರದಲ್ಲಿ 2018-19 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆಯಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: 375 ಎಂಎನ್‌ವೈ 2018, ದಿನಾಂಕ: 01-02-2019 ಅನುಬಂಧ-5ರ ಕ್ರಮ ಸಂಖ್ಯೆ: 24 ಮತ್ತು 25 ರಲ್ಲಿನ "Construction of RO Plant and Drilling of Borewells installation of Pump and motors, providing pipeline and additional motor pumps and necessary accessories to existing borewells in Bellahalli, Kattigenahlli, Chokkanahlli, Thirumenahalli, Palanahalli, Agrahara, Sampigenahlli, Srirampura, Jakkur, Kogilu in Ward No.05" ಕಾಮಗಾರಿಗೆ ರೂ.800.00 ಲಕ್ಷಗಳನ್ನು ಹಾಗೂ "Drilling of Borewells, Installation of Pump and motors, Providing Pipeline and additional motor pumps and necessary accessories to existing borewells in ward no.06" ಕಾಮಗಾರಿಗೆ ರೂ.450.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿದೆ. ಅದರಂತೆ ಸದರಿ ಕಾಮಗಾರಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಹಾಗೂ ಟೆಂಡರ್‌ಗಳಿಗೆ ಅನುಮೋದನೆ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಸದರಿ ಪ್ರಸ್ತಾವನೆಯನ್ನು ದಿನಾಂಕ: 04-01-2020ರಂದು ನಡೆದ ಅಧಿಕಾರಯುಕ್ತ ಸಮಿತಿಯ ಮುಂದೆ ಮಂಡಿಸಲಾಗಿದ್ದು, ಸದರಿ ಸಮಿತಿಯು ಈ ಕಾಮಗಾರಿಗಳನ್ನು ಬಿಬಿಎಂಪಿ ಯಿಂದ ಕೈಬಿಟ್ಟು, ಬಿಡಬ್ಲ್ಯೂಎಸ್‌ಎಸ್‌ಬಿ ಸಂಸ್ಥೆ ವತಿಯಿಂದ ಕೈಗೊಳ್ಳಲು ಅನುವಾಗುವಂತೆ ಅನುದಾನ ವರ್ಗಾಹಿಸಬಹುದಾಗಿರುತ್ತದೆಯೆಂದು ತೀರ್ಮಾನವಾಗಿರುತ್ತದೆ.

ವಾರ್ಡ್ ನಂ. 05 ಮತ್ತು 06ರ ಪ್ರದೇಶಗಳು 110 ಹಳ್ಳಿಗಳಿಂದ ಸೇರ್ಪಡೆಗೊಂಡು ವಾರ್ಡ್ ನಂ.05ರ ವ್ಯಾಪ್ತಿಯಲ್ಲಿ ಸಂಪಿಗೇಹಳ್ಳಿ, ಅಗ್ರಹಾರ, ಚೊಕ್ಕನಹಳ್ಳಿ, ತಿರುಮೇನಹಳ್ಳಿ, ಶ್ರೀರಾಮಪುರ, ಕೋಗಿಲು, ಪಾಲನಹಳ್ಳಿ, ಕಟ್ಟಿಗೇನಹಳ್ಳಿ, ಮತ್ತು ಬೆಳ್ಳಹಳ್ಳಿ ಗ್ರಾಮಗಳು ಹಾಗೂ ವಾರ್ಡ್ ನಂ.06ರ ವ್ಯಾಪ್ತಿಯಲ್ಲಿ ದಾಸರಹಳ್ಳಿ, ರಾಚೇನಹಳ್ಳಿ ಮತ್ತು ಥಣಿಸಂದ್ರ ಗ್ರಾಮಗಳನ್ನೊಳಗೊಂಡ ವಾರ್ಡ್‌ಗಳು ರಚನೆಯಾಗಿದ್ದು, ಸದರಿ ಹಳ್ಳಿ ಪ್ರದೇಶದ ವಾರ್ಡ್‌ಗಳಲ್ಲಿ ಬಿಬಿಎಂಪಿ ವತಿಯಿಂದ ಕೊಳವೆ ಬಾವಿಗಳ ಮುಖಾಂತರ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದ್ದು, ಹಾಲಿ ಇರುವ ಕೊಳವೆ ಬಾವಿಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದ್ದು, ಹಾಗೂ ಕೆಲವು ಕೊಳವೆ ಬಾವಿಗಳು ಬತ್ತಿ

. . .5/-

Scanned by TapScanner

ಹೋಗಿದ್ದು, ಸಾರ್ವಜನಿಕ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿರುವುದರಿಂದ ತಾತ್ಕಾಲಿಕವಾಗಿ ಬಿಬಿಎಂಪಿ ವತಿಯಿಂದ ಟ್ಯಾಂಕರ್‌ಗಳ ಮುಖಾಂತರ ನೀರು ಸರಬರಾಜು ಮಾಡಲಾಗುತ್ತಿದೆ.

2020ರ ಬೇಸಿಗೆಯಲ್ಲಿ ವಾರ್ಡ್ ನಂ. 05 ಮತ್ತು 06ರ ಪ್ರದೇಶಗಳಲ್ಲಿ ಕುಡಿಯುವ ನೀರಿಗಾಗಿ ತುಂಬಾ ಆಹಾಕಾರ ಉಂಟಾಗಿದ್ದು, ಸಾರ್ವಜನಿಕ ಸೇವಾ ಹಿತದೃಷ್ಟಿ ಹಾಗೂ ಕುಡಿಯುವ ನೀರಿನ ಅಭಾವವನ್ನು ನೀಗಿಸಲು ತುರ್ತಾಗಿ ಕೊಳವೆ ಬಾವಿಗಳನ್ನು ಕೊರೆಯು ಪೈಪ್ ಲೈನ್ ಅಳವಡಿಸಿ ಸಾರ್ವಜನಿಕರಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವುದು ತುಂಬಾ ಅವಶ್ಯಕವಿರುವುದರಿಂದ ದಿನಾಂಕ: 04-01-2020ರ ಅಧಿಕಾರಯುಕ್ತ ಸಭೆಯಲ್ಲಿ ಕೈಗೊಂಡಿರುವ ನಿರ್ಣಯವನ್ನು ಮಾರ್ಪಡಿಸಿ, ಬಿಬಿಎಂಪಿ ವತಿಯಿಂದ ಕೊಳವೆ ಬಾವಿಗಳನ್ನು ಕೊರೆಯಲು ಪೈಪ್ ಲೈನ್ ಅಳವಡಿಸುವ ದಿನಾಂಕ: 22-11-2019 ರ ಪ್ರಸ್ತಾವನೆಗಳ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್‌ಗಳಿಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮೇಲಿ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ದಿನಾಂಕ: 23-03-2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ಮುಂದೆ ಬಿ.ಬಿ.ಎಂ.ಪಿ. ಆಯುಕ್ತರ ದಿನಾಂಕ: 16-03-2020ರ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು, ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ವಿಷಯವನ್ನು ಚರ್ಚಿಸಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

"ವಿವರವಾದ ಚರ್ಚೆಯ ನಂತರ "Drilling of Borewells, Installation of Pump and motors, Providing Pipeline and additional motor pumps and necessary accessories to existing borewells in ward no.06" ಪ್ಯಾಕೇಜಿನ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ M/s Sathya Borwell Cleaning ರವರ ಬಿಡ್ಡನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.4,01,72,815.20 ಗಳಿಗೆ ಹೋಲಿಸಿದಾಗ 5% ಅಧಿಕ ಅಂದರೆ, ರೂ.4,17,75,710.53ಗಳ ಮೊತ್ತಕ್ಕೆ ಮಿತಿಗೊಳಿಸಿ ಅನುಮೋದಿಸಲು ಮತ್ತು ಬಿಡ್‌ದಾರರು ಒಪ್ಪದ ಪಕ್ಷದಲ್ಲಿ ಮರುಟೆಂಡರ್ ಕರೆಯಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ದಿನಾಂಕ: 23-03-2020ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ನಅಇ 271 ಎಂಎನ್‌ಪೈ 2019,
ಬೆಂಗಳೂರು, ದಿನಾಂಕ: 01-07-2020.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ಪೈ 2018, ದಿನಾಂಕ:20-09-2019 ರಲ್ಲಿ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾ ಯೋಜನೆಯ ಅನುಬಂಧ-5ರ ಕ್ರಮ ಸಂಖ್ಯೆ: 25ರ "Drilling of Borewells, Installation of Pump and motors, Providing Pipeline and additional motor pumps and necessary accessories to existing borewells in ward no.06" ಪ್ಯಾಕೇಜಿನ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ದಿನಾಂಕ: 23-03-2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ ಟೆಂಡರ್‌ಗಿಟ್ಟ ಮೊತ್ತ ರೂ.4,01,72,815.20 ಗಳಿಗೆ ಹೋಲಿಸಿದಾಗ 5% ಅಧಿಕ ಅಂದರೆ, ರೂ.4,17,75,710.53ಗಳ (ನಾಲ್ಕು ಕೋಟಿ ಹದಿನೇಳು ಲಕ್ಷದ ಎಪ್ಪತ್ತೈದು ಸಾವಿರದ ಏಳುನೂರ ಹತ್ತು

...6/-

Scanned by TapScanner

ರೂಪಾಯಿಗಳು ಮತ್ತು ಐವತ್ತ ಮೂರು ಪೈಸೆಗಳು ಮಾತ್ರ) ಗಳ ಮೊತ್ತಕ್ಕೆ ಮಿತಿಗೊಳಿಸಿ, M/s Sathya Borwell Cleaning ರವರ ಟೆಂಡರ್‌ಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮೋದನೆಯನ್ನು ನೀಡಿದೆ.

ಷರತ್ತುಗಳು:

1. ಕಾಮಗಾರಿಗಳಿಗೆ ಬಿಡ್‌ದಾರರು ಒಪ್ಪದ ಪಕ್ಷದಲ್ಲಿ ಮರು ಟೆಂಡರ್ ಕರೆಯುವುದು.
2. ಮೇಲಿನ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ / ನಿಯಮಗಳು ಹಾಗೂ ಎಲ್ಲಾ ಚಾಲ್ತಿ ನಿಯಮಗಳನ್ನು ಪಾಲಿಸಿಕೊಂಡು ಅನುಷ್ಠಾನಗೊಳಿಸುವುದು.
3. ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20-09-2019ರ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಯೋಜನೆಯ ಅನುದಾನದಲ್ಲಿ ಮೀಸಲಿಟ್ಟಿರುವ ಅನುದಾನದಲ್ಲಿ ಭರಿಸುವುದು.
4. ಮೇಲಿನ ಕಾಮಗಾರಿಯನ್ನು ಸರ್ಕಾರದಿಂದ ಮಂಜೂರಾದ ಮೊತ್ತದ ಮಿತಿಯಲ್ಲಿಯೇ ಯಾವುದೇ ಹೆಚ್ಚುವರಿಯಾಗದಂತೆ ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು.
5. ಸರ್ಕಾರವು ಕಾಮಗಾರಿಗಳಿಗೆ ಆಡಳಿತಾತ್ಮಕ ಮತ್ತು ಟೆಂಡರ್‌ಗಳಿಗೆ ಅನುಮೋದನೆ ನೀಡಿದ್ದಾಗ್ಯೂ ಸಹ ಕಾಮಗಾರಿಯು ಪುನರಾವರ್ತನೆ ಆಗದಂತೆ ನೋಡಿಕೊಳ್ಳತಕ್ಕದ್ದು. ಅನುಮೋದನೆ ಗೊಂಡಿರುವ ಕಾಮಗಾರಿಯನ್ನಲ್ಲದೆ ಯಾವುದೇ ಕಾರಣಕ್ಕೆ ಬೇರೆ ಕಾಮಗಾರಿಗಳನ್ನು ಕೈಗೊಳ್ಳಬಾರದು.
6. ಕರ್ನಾಟಕ ಆರ್ಥಿಕ ಸಂಹಿತೆ 1958 ಸಾಧಿಲ್ವಾರು ವೆಚ್ಚ ಕೈಪಿಡಿ ಅಧಿನಿಯಮ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಕಾಯ್ದೆ ನಿಯಮಗಳುಸಾರ ಕ್ರಮವಹಿಸತಕ್ಕದ್ದು.
7. ಮೇಲಿನ ಕಾಮಗಾರಿಗೆ 3rd Party Quality Monitors ಗಳನ್ನು ನೇಮಿಸಿಕೊಂಡು ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು.
8. ದಿನಾಂಕ: 23-03-2020ರ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಯಲ್ಲಿ ನಮೂದಿಸಿರುವ ಎಲ್ಲಾ ಷರತ್ತು ಹಾಗೂ ನಿಬಂಧನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಅಕ್ಷ್ಮೀಸಾಗರ್ ಎನ್.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

01/07

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.

...7/-

Scanned by TapScanner

7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3 ಮತ್ತು 9), ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿಗಳು-3 ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
11. ಕಾರ್ಯಪಾಲಕ ಅಭಿಯಂತರರು (ತಾಂತ್ರಿಕ ಕೋಶ), ನಗರಾಭಿವೃದ್ಧಿ ಇಲಾಖೆ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಹೊಗ[illegible]ದೆ
ದಿನಾಂಕ :..24.2.20.....

Scanned by TapScanner

27/MN/19

160.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಆಯುಕ್ತರು/ಪಿಆರ್/(ಜಿ)6076/2019-20

ಆಯುಕ್ತರವರ ಕಛೇರಿ,
ಎನ್.ಆರ್.ಚೌಕ, ಬೆಂಗಳೂರು-02
ದಿನಾಂಕ: 16-03-2020

ರವರಿಗೆ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಇಲಾಖೆ
ವಿಕಾಸ ಸೌಧ
ಬೆಂಗಳೂರು.

ವಿಷಯ:- 2018-19ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳ ನವ ನಗರೋತ್ಥಾನ ಕ್ರಿಯಾ ಯೋಜನೆ ಅನುಬಂಧ-5 ಕಾಮಗಾರಿ ಕ್ರಮ ಸಂಖ್ಯೆ: 24 ಮತ್ತು 25ರ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಪಟ್ಟಿಗಳಿಗೆ ಮತ್ತು ಟೆಂಡರ್‌ಗೆ ಅನುಮೋದನೆ ನೀಡಲು ಅಧಿಕಾರಯುಕ್ತ ಸಮಿತಿಯನ್ನು ಕೋರುವ ಬಗ್ಗೆ.

ಉಲ್ಲೇಖ:- 1) ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20-09-2019.
2) ಮಾನ್ಯ ಆಯುಕ್ತರವರ ಪತ್ರ ಸಂ:ಆಯುಕ್ತರು/ಪಿಆರ್/ಜಿ/6076/2019-20 ದಿನಾಂಕ: 22-11-2019.
3) ಮಾನ್ಯ ಆಯುಕ್ತರವರ ಪತ್ರ ಸಂ:ಆಯುಕ್ತರು/ಪಿಆರ್/ಜಿ/6077/2019-20 ದಿನಾಂಕ: 22-11-2019.
4) ಸರ್ಕಾರ ಮಟ್ಟದ ಅಧಿಕಾರಯುಕ್ತ ಸಮಿತಿ ಸಭೆ ದಿನಾಂಕ:04-01-2020ರ ವಿಷಯ ಸಂ:14 ಮತ್ತು 15ರ ನಡವಳಿ

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಮುಖ್ಯ ಮಂತ್ರಿಗಳ ನವ ನಗರೋತ್ಥಾನ ಯೋಜನೆಯಡಿಯಲ್ಲಿ ಘನ ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20-09-2019ರ ಕ್ರಿಯಾ ಯೋಜನೆ ಅನುಬಂಧ-05 ಕ್ರಮ ಸಂಖ್ಯೆ:24 ಮತ್ತು 25ರಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಅನುಮೋದನೆಯನ್ನು ನೀಡಲಾಗಿರುತ್ತದೆ.

ಕ್ರ.ಸಂ	ಕಾಮಗಾರಿ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
1	Construction of RO Plant and Drilling of Borewells installation of Pump and motors, providing pipeline and additional motor pumps and necessary accessories to existing borewells in Bellahlli. Kattigenahlli, Chokkanahlli, Thirumenahalli, Palanahalli, Agrahara. Sampigenahlli, Srirampura, Jakkur, Kogilu in Ward No.05	800.00
2	Drilling of Borewells, Installation of Pump and motors, Providing Pipeline and additional motor pumps and necessary accessories to existing borewells in ward no.06	450.00

Scanned by TapScanner

ಮೇಲ್ಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಪಟ್ಟಿಗಳಿಗೆ ಮತ್ತು ಟೆಂಡರ್‌ಗಳಿಗೆ ಅನುಮೋದನೆಯನ್ನು ನೀಡಲು ಉಲ್ಲೇಖ(2) ಮತ್ತು (3)ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಉಲ್ಲೇಖ(3)ರಲ್ಲಿ ದಿನಾಂಕ:04-01-2020ರಲ್ಲಿ ನಡೆದ ಅಧಿಕಾರಯುಕ್ತ ಸಮಿತಿ ಸಭೆ ವಿಷಯ ಸಂಖ್ಯೆ: 14 ಮತ್ತು 15ರಲ್ಲಿ ಮಂಡಿಸಿ ಸದರಿ ಕಾಮಗಾರಿಗಳನ್ನು ಬಿಬಿಎಂಪಿಯಿಂದ ಕೈ ಬಿಟ್ಟು ಬಿಡಬ್ಲ್ಯೂಎಸ್‌ಎಸ್‌ಬಿ ಸಂಸ್ಥೆ ವತಿಯಿಂದ ಕೈಗೊಳ್ಳಲು ಅನುವುವಾಗುವಂತೆ ಅನುದಾನ ವರ್ಗಾಯಿಸಬಹುದಾಗಿರುತ್ತದೆಯೆಂದು ತೀರ್ಮಾನವಾಗಿರುತ್ತದೆ.

ವಾರ್ಡ್ ನಂ:05 ಮತ್ತು 06ರ ಪ್ರದೇಶಗಳು 110 ಹಳ್ಳಿಗಳಿಂದ ಸೇರ್ಪಡೆಗೊಂಡು ವಾರ್ಡ್ ನಂ:05ರ ವ್ಯಾಪ್ತಿಯಲ್ಲಿ ಸಂಪಿಗೇಹಳ್ಳಿ, ಅಗ್ರಹಾರ, ಚೊಕ್ಕನಹಳ್ಳಿ ತಿರುಮೇನಹಳ್ಳಿ, ಶ್ರೀರಾಮಪುರ, ಕೋಗಿಲು, ಪಾಲನಹಳ್ಳಿ, ಕಟ್ಟಿಗೇನಹಳ್ಳಿ ಮತ್ತು ಬೆಳ್ಳಹಳ್ಳಿ ಗ್ರಾಮಗಳು ಹಾಗೂ ವಾರ್ಡ್ ನಂ:06ರ ವ್ಯಾಪ್ತಿಯಲ್ಲಿ ದಾಸರಹಳ್ಳಿ, ರಾಚೇನಹಳ್ಳಿ ಮತ್ತು ಹುಣಸಂಜ್ರ ಗ್ರಾಮಗಳನ್ನೊಳಗೊಂಡು ವಾರ್ಡ್‌ಗಳು ರಚನೆಯಾಗಿದ್ದು, ಸದರಿ ಹಳ್ಳಿ ಪ್ರದೇಶದ ವಾರ್ಡ್‌ಗಳಲ್ಲಿ ಸಾರ್ವಜನಿಕ ಕುಡಿಯುವ ನೀರು ಸರಬರಾಜನ್ನು ಬಿಬಿಎಂಪಿವತಿಯಿಂದ ಕೊಳವೆ ಬಾವಿಗಳ ಮುಖಾಂತರ ಸರಬರಾಜು ಮಾಡಲಾಗುತ್ತಿದ್ದು, ಹಾಲಿ ಇರುವ ಕೊಳವೆ ಬಾವಿಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದ್ದು, ಹಾಗೂ ಕೆಲವು ಕೊಳವೆ ಬಾವಿಗಳು ಬತ್ತಿ ಹೋಗಿದ್ದು, ಸಾರ್ವಜನಿಕರಿಗೆ ಕುಡಿಯುವ ನೀರಿಗಾಗಿ ತುಂಬಾ ತೊಂದರೆಯಾಗಿರುವುದರಿಂದ ತಾತ್ಕಾಲಿಕವಾಗಿ ಬಿಬಿಎಂಪಿ ವತಿಯಿಂದ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿರುತ್ತದೆ.

2020ನೇ ಬೇಸಿಗೆಯಲ್ಲಿ ವಾರ್ಡ್ ನಂ:05 ಮತ್ತು 06ರಲ್ಲಿ ಕುಡಿಯುವ ನೀರಿಗಾಗಿ ತುಂಬಾ ಹಾಹಾಕಾರ ಉಂಟಾಗಿದ್ದು, ಸಾರ್ವಜನಿಕ ಸೇವಾ ಹಿತದೃಷ್ಟಿ ಹಾಗೂ ಕುಡಿಯುವ ನೀರಿನ ಅಭಾವವನ್ನು ನೀಗಿಸಲು ತುರ್ತಾಗಿ ಕೊಳವೆ ಬಾವಿಗಳನ್ನು ಕೊರೆದು ಪೈಪ್ ಲೈನ್ ಅಳವಡಿಸಿ ಸಾರ್ವಜನಿಕರಿಗೆ ಕುಡಿಯುವ ನೀರನ್ನು ಸರಬರಾಜು ಮಾಡಲು ತುಂಬಾ ಅತ್ಯವಶ್ಯಕವಾಗಿರುವುದರಿಂದ ಉಲ್ಲೇಖ(3)ರಲ್ಲಿ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಮಾರ್ಪಡಿಸಿ ಬಿಬಿಎಂಪಿ ವತಿಯಿಂದ ಕೊಳವೆ ಬಾವಿಗಳನ್ನು ಕೊರೆಯಲು ಪೈಪ್ ಲೈನ್ ಅಳವಡಿಸುವ ಉಲ್ಲೇಖ(2) ಮತ್ತು (3)ರಲ್ಲಿ ಸಲ್ಲಿಸಿರುವ ಪ್ರಸ್ತಾವನೆಯ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಮತ್ತು ಟೆಂಡರ್‌ಗಳಿಗೆ ಅನುಮೋದನೆಯನ್ನು ಮುಂದಿನ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಅನುಮೋದನೆಯನ್ನು ನೀಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

Scanned by TapScanner

ಕರ್ನಾಟಕ ಸರ್ಕಾರ

158

ಸಂಖ್ಯೆ: ನಅಇ 271 ಎಂಎನ್‌ವೈ 2019

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 05-03-2020.

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ:

ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಮಾನ್ಯರೆ,

ವಿಷಯ: 2018-19ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳು ನವ ನಗರೋತ್ಥಾನ ಯೋಜನೆಯಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿ Drilling of Borewells, Installation of Pump and motors, Providing Pipeline and additional motor pumps and necessary accessories to existing borewells in ward no.06 ಯೋಜನೆಯ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಮಂಜೂರಾತಿ ನೀಡುವ ಬಗ್ಗೆ (ಅಂದಾಜು ಮೊತ್ತ ರೂ.450.00 ಲಕ್ಷಗಳು).

ಉಲ್ಲೇಖ: 1. ತಮ್ಮ ಪತ್ರ ಸಂಖ್ಯೆ: ಆಯುಕ್ತರು/ಪಿಆರ್/6076/2019-20, ದಿನಾಂಕ: 22-11-2019.
2. ದಿನಾಂಕ: 04-01-2020ರ ಅಧಿಕಾರಯುಕ್ತ ಸಮಿತಿಯ ನಿರ್ಣಯ.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಪತ್ರದಲ್ಲಿ 2018-19ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳು ನವ ನಗರೋತ್ಥಾನ ಯೋಜನೆಯಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿ Drilling of Borewells, Installation of Pump and motors, Providing Pipeline and additional motor pumps and necessary accessories to existing borewells in ward no.06 ಯೋಜನೆಯ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಮಂಜೂರಾತಿ ನೀಡುವ ನೀಡುವಂತೆ ಕೋರಿರುವುದು ಸರಿಯಷ್ಟೆ.

ದಿನಾಂಕ: 22-11-2019ರ ತಮ್ಮ ಪ್ರಸ್ತಾವನೆಯನ್ನು ದಿನಾಂಕ: 04-01-2020 ರಂದು ನಡೆದ ಅಧಿಕಾರಯುಕ್ತ ಸಮಿತಿಯ ಮುಂದೆ ಮಂಡಿಸಿದ್ದು, ಅಧಿಕಾರಯುಕ್ತ ಸಮಿತಿಯು ಈ ಕೆಳಕಂಡಂತೆ ತೀರ್ಮಾನಿಸಿರುತ್ತದೆ.

"ವಿವರವಾದ ಚರ್ಚೆಯ ನಂತರ ವಿಷಯವನ್ನು ಮುಂದೂಡಿ ಯೋಜನೆಯ ಅಗತ್ಯತೆಯ ಬಗ್ಗೆ ಪರಿಶೀಲಿಸಿ ಅಗತ್ಯವಿದ್ದಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ. ಸಂಸ್ಥೆಯಿಂದ ಅನುಷ್ಠಾನಗೊಳಿಸುವಂತೆ ಪ್ರಸ್ತಾವನೆಯನ್ನು ಬಿ.ಡಬ್ಲ್ಯು.ಎಸ್.ಎಸ್.ಬಿ. ಗೆ ಕಳುಹಿಸಲು ಆಯುಕ್ತರು ಕ್ರಮ ತೆಗೆದುಕೊಳ್ಳುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಆದುದರಿಂದ, ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಲಕ್ಷ್ಮೀಸಾಗರ್ ಎಸ್.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

05/03

ಹೊರಡಿಸಿದೆ
ದಿನಾಂಕ: 05/03/2020.

Scanned by TapScanner

ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿನ ಕಾಮಗಾರಿಗಳ ಅನುಷ್ಠಾನಕ್ಕಾಗಿ ಸರ್ಕಾರದಿಂದ ನೀಡುವ ಅನುದಾನದಡಿ ಕೈಗೊಳ್ಳುವ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಹಾಗೂ ಟೆಂಡರ್‌ಗಳಿಗೆ ಅನುಮೋದನೆ ನೀಡುವ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳಲು ರಚಿತ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಗಳು.

ಸ್ಥಳ: ಕೊಠಡಿ ಸಂಖ್ಯೆ 223, ವಿಕಾಸ ಸೌಧ ದಿನಾಂಕ: 04-01-2020 ಅಪರಾಹ್ನ 3:00 ಘಂಟೆ

ಉಪಸ್ಥಿತರು

1.	ಡಾ ರಮಣ ರೆಡ್ಡಿ ಇವಿ, ಭಾ.ಆ.ಸೇ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.	ಅಧ್ಯಕ್ಷರ
2.	ಶ್ರೀ. ಅನಿಲ್ ಕುಮಾರ್ ಬಿ.ಹೆಚ್., ಭಾ.ಆ.ಸೇ. ಆಯುಕ್ತರು, ಬಿಬಿಎಂಪಿ.	ಸದಸ್ಯರು
3.	ಡಾ ಪಿ.ಸಿ.ಜಾಫರ್, ಭಾ.ಆ.ಸೇ. ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.	ಸದಸ್ಯರು
4.	ಶ್ರೀ. ಎಂ.ಆರ್.ವೆಂಕಟೇಶ್, ಪ್ರಧಾನ ಅಭಿಯಂತರರು, ಬಿಬಿಎಂಪಿ.	ಸದಸ್ಯರು
5.	ಶ್ರೀ.ಎಸ್ ರಮೇಶ್, ಮುಖ್ಯ ಅಭಿಯಂತರರು (ಯೋ.ಕೇಂ.) ಬಿಬಿಎಂಪಿ	ಸದಸ್ಯರು
6.	ಶ್ರೀ.ವಿಜಯ್ ಕುಮಾರ್, ಮುಖ್ಯ ಅಭಿಯಂತರರು (ರಾಜರಾಜೇಶ್ವರಿ ನಗರ ವಲಯ) ಬಿಬಿಎಂಪಿ	ಸದಸ್ಯರು
7.	ಶ್ರೀ.ನಾಗರಾಜು, ಮುಖ್ಯ ಅಭಿಯಂತರರು (ಪಶ್ಚಿಮ ವಲಯ) ಬಿಬಿಎಂಪಿ	ಸದಸ್ಯರು
8.	ಶ್ರೀ.ರಂಗನಾಥ್, ಮುಖ್ಯ ಅಭಿಯಂತರರು (ಯಲಹಂಕ ವಲಯ) ಬಿಬಿಎಂಪಿ	ಸದಸ್ಯರು
9.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆರವರ ಪ್ರತಿನಿಧಿ.	ಸದಸ್ಯರು
10.	ಶ್ರೀ ಧರ್ಮಪ್ರಸಾದ್ ಗೌತಮ್ ಗಾಂವಕರ್, ಕಾರ್ಯಪಾಲಕ ಅಭಿಯಂತರರು, ನಗರಾಭಿವೃದ್ಧಿ ಇಲಾಖೆ (ಸಾಂಖ್ಯಿಕ ಕೋಶ)	ಸದಸ್ಯರು
11.	ಶ್ರೀ. ಕೆ.ಎ. ಪಿದಾಯತ್ತುಲ್ಲ, ಉಪ ಕಾರ್ಯದರ್ಶಿ-3, ನಗರಾಭಿವೃದ್ಧಿ ಇಲಾಖೆ.	ಸದಸ್ಯ ಕಾರ್ಯದರ್ಶಿ
12.	ಯೋಜನೆಗಳಿಗೆ ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ.	

* * * * * * * * *

ಅಧಿಕಾರಯುಕ್ತ ಸಮಿತಿಯ ಸಭೆಯ ಅಧ್ಯಕ್ಷರಾದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸುತ್ತಾ ಅಧಿಕಾರಯುಕ್ತ ಸಮಿತಿಯ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ಮಂಡಿಸಲು ಸೂಚಿಸಲಾಗಿ ಈ ಕೆಳಗಿನಂತೆ ಟೆಂಡರ್ ಪ್ಯಾಕೇಜ್‌ವಾರು ವಿಷಯಗಳನ್ನು ಚರ್ಚಿಸಲಾಯಿತು.

ವಿಷಯ 1 : "Construction of Multilevel Car Parking at Kidwai Institute of Onchology" ಕಾಮಗಾರಿಯ ಅಂದಾಜು ಮೊತ್ತ ರೂ. 1500.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಸದರಿ ಕಾಮಗಾರಿಯ ಟೆಂಡರ್ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ನೀಡುವ ಬಗ್ಗೆ.

ನಅಇ 13 ಎಂಎನ್ ವೈ 2019

a) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರಗಳ ದಿನಾಂಕ: 16-07-2019 ಮತ್ತು02.05.2019ರಲ್ಲಿ "Construction of Multilevel Car Parking at Kidwai Institute of Onchology" ಕಾಮಗಾರಿಯ ಅಂದಾಜು ಮೊತ್ತ ರೂ. 1500.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಸದರಿ ಕಾಮಗಾರಿಯ ಟೆಂಡರ್ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

b) ಬೆಂಗಳೂರು ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ "Construction of Multilevel Car Parking at Kidwai Institute of Onchology" ಕಾಮಗಾರಿಗೆ 2016-17ನೇ ಸಾಲಿನ ದರಪಟ್ಟಿಯಂತೆ ರೂ. 15.00 ಕೋಟಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

c) ಈ ಕಾಮಗಾರಿಯನ್ನು ಬಿಬಿಎಂಪಿಯು ಸ್ವಂತ ಸಂಪನ್ಮೂಲದಿಂದ ಅನುಷ್ಠಾನಗೊಳಿಸಲು ಯೋಜಿಸಿದೆ. ಪಾಲಿಕೆಯ 2018-19ನೇ ಸಾಲಿನ ಆಯವ್ಯಯದಲ್ಲಿ ಸದರಿ ಕಾಮಗಾರಿಗೆ ಕಾಮಗಾರಿ ಸಂಕೇತವನ್ನು ನೀಡಿದ್ದು, ಸದರಿ ಕಾಮಗಾರಿಗೆ ಪಿ-3301 ಲೆಕ್ಕಶೀರ್ಷಿಕೆಯಲ್ಲಿ ರೂ. 4.00 ಕೋಟಿಗಳ ಅನುದಾನವನ್ನು ಮೀಸಲಿಟ್ಟಿದ್ದರೂ ಸಹ ಒಟ್ಟಾರೆ ಆಯವ್ಯಯದಲ್ಲಿನ ಉಳಿತಾಯ ಮೊತ್ತದಲ್ಲಿ ರೂ. 15.00 ಕೋಟಿಗಳಿಗೆ

Scanned by TapScanner

ಕಾಮಗಾರಿ ಸಂಕೇತ ನೀಡಲಾಗಿರುತ್ತದೆ. ಒಂದು ವೇಳೆ ಕಾಮಗಾರಿಗೆ ತುರ್ತಾಗಿ ಅನುದಾನ ಕಲ್ಪಿಸಬೇಕಾ
ಪಕ್ಷದಲ್ಲಿ ಆಯವ್ಯಯದ ಮರುಹೊಂದಾಣಿಕೆ ಅನುದಾನದಲ್ಲಿ ಸದರಿ ಯೋಜನೆಯ ವೆಚ್ಚವನ್ನು ಭರಿ
ಅವಕಾಶ ಕಲ್ಪಿಸಲಾಗುವುದು ಹಾಗೂ 2019-20ನೇ ಸಾಲಿನ ಆಯವ್ಯಯದಲ್ಲಿ ಮುಂದುವ
ಕಾಮಗಾರಿಗಳಿಗೆ (Spill Over) ಮೀಸಲಿಟ್ಟಿರುವ ಒಟ್ಟಾರೆ ಅನುದಾನದಲ್ಲಿ ಈ ಕಾಮಗಾರಿ ವೆಚ್ಚವನ್ನು
ಭರಿಸಲು ಕ್ರಮ ಕೈಗೊಳ್ಳಲಾಗುವುದೆಂದು ಆಯುಕ್ತರು ವರದಿ ಮಾಡಿರುತ್ತಾರೆ.

d) ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, (ಯೋಜನೆ ಕೇಂದ್ರ-5), ಬಿಬಿಎಂಪಿ ರವರು ದಿನಾಂಕ: 14.09.2018 ರಂದು ಇ-ಪ್ರಕ್ಯೂರ್ ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಪ್ರಸ್ತಾವನೆಯ ತಾಂತ್ರಿಕ ಬಿಡ್ಡನ್ನು ದಿನಾಂಕ: 03-12-2018 ರಂದು ಪರಿಶೀಲಿಸಿದ್ದು, ಭಾಗವಹಿಸಿದ್ದ ಇಬ್ಬರು ಗುತ್ತಿಗೆದಾರರನ್ನು ತಾಂತ್ರಿಕವಾಗಿ ಅರ್ಹರೆಂದು ಮುಖ್ಯ ಇಂಜಿನಿಯರ್, ಪ್ರಾಜೆಕ್ಟ್ ಸೆಂಟ್ರಲ್ ರವರು ಅನುಮೋದನೆ ನೀಡಿದ್ದು, ಅವರ ಆರ್ಥಿಕ ಬಿಡ್ಡನ್ನು ತೆರೆಯಲು ಅನುಮೋದನೆ ನೀಡಿರುತ್ತಾರೆ. ದಿನಾಂಕ: 26-12-2018 ರಂದು ಆರ್ಥಿಕ ಬಿಡ್ಡನ್ನು ತೆರೆಯಲಾಗಿರುತ್ತದೆ. ಆರ್ಥಿಕ ಬಿಡ್ ನ ವಿವರಗಳು ಈ ಕೆಳಕಂಡಂತಿರುತ್ತದೆ.

ಟೆಂಡರ್‌ಗಿಟ್ಟ ಮೊತ್ತ (ರೂ.)		13,16,63,077.66 (2016-17ನೇ ಸಾಲಿನ ದರಪಟ್ಟಿಯಂತೆ)	
ಕ್ರ ಸಂ	ಅರ್ಹಗುತ್ತಿಗೆದಾರರ ಹೆಸರು.	ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ.ಗಳು ಹಾಗೂ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ (ಶೇಕಡಾವಾರು ಹೆಚ್ಚಳ 2016-17ನೇ ಸಾಲಿನ ದರಪಟ್ಟಿಯಂತೆ).	ಬಿಬಿಎಂಪಿಯು ಶಿಫಾರಸ್ಸು ಮಾಡಿದ್ದ ಗುತ್ತಿಗೆದಾರರ ಸಂಧಾನಿತ ಮೊತ್ತ ರೂ. ಗಳು ಹಾಗೂ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ (ಶೇಕಡಾವಾರು ಹೆಚ್ಚಳ 2016-17ನೇ ಸಾಲಿನ ದರಪಟ್ಟಿಯಂತೆ)
1	Sri M Rajendra (M/s MR Constructions)	ರೂ.21,65,88,061.70/- (+64.50%)	ರೂ.16,45,57,003/- (+24.98%)
2	Sri V Vishwanath	ರೂ.22,15,47,812.80/- (+68.27%)	-

e) ~~ಅಧಿಕಾರಯುಕ್ತ ಸಮಿತಿಯ ನಿರ್ಣಯ:~~

ವಿವರವಾದ ಚರ್ಚೆಯ ನಂತರ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ Sri M Rajendra (M/s MR Constructions) ರವರ ಬಿಡ್ಡ್‌ನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ. 13,16,63,077.66/- ಗಳಿಗೆ ಹೋಲಿಸಿದಾಗ 5% ಅಧಿಕ ಅಂದರೆ ರೂ. 13,82,46,232/-ಗಳಿಗೆ ಮಿತಿಗೊಳಿಸಿ (ಅನ್ವಯವಾಗುವ ಎಲ್ಲ ಟ್ಯಾಕ್ಸ್ ಒಳಗೊಂಡಂತೆ) ಅನುಮೋದಿಸಲು ಮತ್ತು ಬಿಡ್‌ದಾರರು ಒಪ್ಪದ ಪಕ್ಷದಲ್ಲಿ ಮರುಟೆಂಡರ್ ಕರೆಯಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಬಿಬಿಎಂಪಿಯು ಕಡ್ಡಾಯವಾಗಿ ಸದರಿ ಯೋಜನೆಯನ್ನು ತನ್ನ ಸ್ವಂತ ಸಂಪನ್ಮೂಲಗಳಿಂದ ಅನುಷ್ಠಾನಗೊಳಿಸುವುದು.

ವಿಷಯ 2 : 2018-19ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆಯಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿ Comprehensive development of roads and drains in Malleshwaram division ಯೋಜನೆಯ ರೂ.13.00 ಕೋಟಿಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಗೆ ಅನುಮೋದನೆ ನೀಡುವ ಬಗ್ಗೆ.
ನಅಇ 274 ಎಂಎನ್ ವೈ 2019

a) 2018-19ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆಯ ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ: ನಅಇ 375 ಎಂಎನ್ ವೈ 2018, ದಿನಾಂಕ: 20.09.2019ರಲ್ಲಿ ಅನುಮೋದನೆಯಾಗಿರುವ ಕ್ರಿಯಾ ಯೋಜನೆಯ ಅನುಬಂಧ-2 ರಸ್ತೆ ಅಭಿವೃದ್ಧಿ ಶೀರ್ಷಿಕೆಯ ಕ್ರಮ ಸಂಖ್ಯೆ 755 & 756 ರಲ್ಲಿ ಅನುಮೋದನೆಯಾಗಿರುವ ಕಾಮಗಾರಿಯ ಟೆಂಡರ್ ಪ್ರಸ್ತಾವನೆಗೆ ಅನುಮೋದನೆ ನೀಡುವಂತೆ ಬಿ.ಬಿ.ಎಂ.ಪಿ ಆಯುಕ್ತರು ಸರ್ಕಾರವನ್ನು ಕೋರಿರುತ್ತಾರೆ.

Scanned by TapScanner

b) ಸದರಿ Package ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎಸ್ ಪೈ 2018, ದಿನಾಂಕ: 20.09.2019ರ ಅನುಬಂಧ '2' ಕ್ರಮ ಸಂಖ್ಯೆ: 755 ರಲ್ಲಿ Development works in Rajmahal Guttahalli main roads and cross roads in ward No. 64 ರಲ್ಲಿ ರೂ.700.00 ಲಕ್ಷಗಳನ್ನು ಹಾಗೂ ಕ್ರಮ ಸಂಖ್ಯೆ: 756 ರಲ್ಲಿ Improvement of asphalting Kadumalleshwaram main roads in ward No. 65 ರಲ್ಲಿ ರೂ.600.00 ಲಕ್ಷಗಳ ಅನುದಾನವನ್ನು ನಿಗಧಿ ಪಡಿಸಲಾಗಿದ್ದು, ಒಟ್ಟು ರೂ.1300 ಲಕ್ಷಗಳಿಗೆ Package-2: Comprehensive development of roads and drains in Malleshwaram division ಎಂಬ ಹೆಸರಿನಲ್ಲಿ ಟೆಂಡರ್ ಕರೆಯಲಾಗಿದೆ.

c) ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ಮಲ್ಲೇಶ್ವರಂ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ದಿನಾಂಕ: 12.10.2019 ರಂದು ಇ-ಪ್ರಕ್ಯೂರ್ ಮೆಂಟ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆದಿರುತ್ತಾರೆ. ಪ್ರಸ್ತಾವನೆಯ ತಾಂತ್ರಿಕ ಬಿಡ್ಡನ್ನು ದಿನಾಂಕ: 03.12.2019 ರಂದು ಪರಿಶೀಲಿಸಿದ್ದು, ಮೂರು ಜನ ಗುತ್ತಿಗೆದಾರರು ಭಾಗವಹಿಸಿದ್ದು, ಇಬ್ಬರು ಗುತ್ತಿಗೆದಾರರನ್ನು ತಾಂತ್ರಿಕವಾಗಿ ಅರ್ಹರೆಂದು ಟೆಂಡರ್ ಪರಿಶೀಲನಾ ಸಮಿತಿಯು ಘೋಷಿಸಿದ್ದು, ಅವರ ಆರ್ಥಿಕ ಬಿಡ್ಡನ್ನು ದಿನಾಂಕ: 13.12.2019 ರಂದು ತೆರೆಯಲಾಗಿರುತ್ತದೆ ಮತ್ತು ದರಸಂಧಾನ ಕೈಗೊಳ್ಳಲಾಗಿದೆ. ಆರ್ಥಿಕ ಬಿಡ್‌ನ ವಿವರಗಳು ಈ ಕೆಳಕಂಡಂತಿರುತ್ತದೆ.

ಟೆಂಡರ್ ಗಿಟ್ಟ ಮೊತ್ತ (ರೂ.)		11,37,92,834/-(ಲೋಕೋಪಯೋಗಿ ಇಲಾಖೆಯ 2018-19ನೇ ಸಾಲಿನ ದರದಂತೆ)	
ಕ್ರ ಸಂ	ಅರ್ಹಗುತ್ತಿಗೆದಾರರ ಹೆಸರು.	ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ.ಗಳು ಹಾಗೂ ಟೆಂಡರ್ ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ (ಶೇಕಡಾವಾರು ಹೆಚ್ಚಳ ಲೋಕೋಪಯೋಗಿ ಇಲಾಖೆಯ 2018-19).	ಬಿಬಿಎಂಪಿಯು ತೀರ್ಮಾರಿಸು ಮಾಡಿದ್ದ ಗುತ್ತಿಗೆದಾರರ ಸಂಧಾನಿತ ಮೊತ್ತ ರೂ. ಗಳು (ಸಾಲಿನ ಲೋಕೋಪಯೋಗಿ ಇಲಾಖೆಯ 2018-19ನೇ ಸಾಲಿನ ದರದಂತೆ).
1	Shri.Dhanjaya BS	ರೂ. 12,63,60,476/- (+11.04%)	ರೂ. 11,94,25,000/- (+4.95%)
2	Shri.Vishwanath KJ (Kumbanahalli Jawarehouwda Vishvanath)	ರೂ. 13,46,49,116/- (+18.32%)	-

d) ಅಧಿಕಾರಯುಕ್ತ ಸಮಿತಿಯ ನಿರ್ಣಯ:

ವಿವರವಾದ ಚರ್ಚೆಯ ನಂತರ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ Shri.Dhanjaya BS ರವರ ಬಿಡ್ಡನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ. 11,37,92,834/- ಗಳಿಗೆ ಹೋಲಿಸಿದಾಗ 4.95% ಅಧಿಕ ಇರುವ ಅಂದರೆ ರೂ. 11,94,25,000/-ಗಳ ಸಂಧಾನಿತ ಮೊತ್ತಕ್ಕೆ (ಅನ್ವಯವಾಗುವ ಎಲ್ಲ ಟ್ಯಾಕ್ಸ್ ಒಳಗೊಂಡಂತೆ) ಅನುಮೋದಿಸಲು ಮತ್ತು ಬಿಡ್‌ದಾರರು ಒಪ್ಪದ ಪಕ್ಷದಲ್ಲಿ ಮರುಟೆಂಡರ್ ಕರೆಯಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 3 : 2018-19ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆಯಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿ Package-3 Comprehensive development and construction of recharging pit in Malleshwaram Assembly constituency approved action plan Sl. No. 1697 and 757 Annexure-02 ಯೋಜನೆಯ ರೂ. 17.00 ಕೋಟಿಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಗೆ ಅನುಮೋದನೆ ನೀಡುವ ಬಗ್ಗೆ.
ನಅಇ 275 ಎಂಎಸ್ ಪೈ 2019

Scanned by TapScanner

a) 2018–19ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆಯಡಿಯಲ್ಲಿ ಕೈಗೊಳ್ಳ... ಉದ್ದೇಶಿಸಿರುವ ಕಾಮಗಾರಿ Package-3 Comprehensive development and construction of rechat... pit in Malleshwaram Assembly constituency approved action plan Sl. No. 1697 and Annexure-02 ಯೋಜನೆಯ ರೂ.17.00 ಕೋಟಿಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಗೆ ಅನುಮೋದನೆ ನೀಡುವಂತೆ ಸರ್ಕಾರವನ್ನು ಬಿ.ಬಿ.ಎಂ.ಪಿ ಆಯುಕ್ತರು ಕೋರಿರುತ್ತಾರೆ.

b) ಸದರಿ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್ ವೈ 2018, ದಿನಾಂಕ: 20.09.2019ರ ಅನುಬಂಧ '2' ಕ್ರಮ ಸಂಖ್ಯೆ: 757 ರಲ್ಲಿ Improvements of Roads Asphalting main roads and cross roads, drains MSR Nagara and Sadashivanagar and RMV Extension tensail roofing ward No. 35 &45 ರಲ್ಲಿ ರೂ.700 ಲಕ್ಷಗಳನ್ನು ಹಾಗೂ ಕ್ರಮ ಸಂಖ್ಯೆ: 1697 ರಲ್ಲಿ Construction of recharging pits in Malleshwaram assembly constituency ಗೆ ರೂ.1000 ಲಕ್ಷಗಳನ್ನು ನಿಗಧಿಪಡಿಸಲಾಗಿದ್ದು, ಒಟ್ಟು ರೂ.1700 ಲಕ್ಷಗಳಿಗೆ Package-3 ನ Comprehensive development and construction of recharging pit in Malleshwaram Assembly constituency approved action plan Sl. No. 1697 and 757 ಎಂಬ ಹೆಸರಿನಲ್ಲಿ ಟೆಂಡರ್ ಕರೆಯಲಾಗಿದೆ.

c) ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ಮಲ್ಲೇಶ್ವರಂ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ದಿನಾಂಕ: 16.10.2019 ರಂದು ಇ–ಪ್ರಕ್ಯೂರ್ ಮೆಂಟ್ ಮೂಲಕ ದ್ವಿ ಲಕೋಟಿ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಪ್ರಸ್ತಾವನೆಯ ತಾಂತ್ರಿಕ ಬಿಡ್ಡನ್ನು ದಿನಾಂಕ: 03.12.2019 ರಂದು ಪರಿಶೀಲಿಸಿದ್ದು, ಮೂರು ಜನ ಗುತ್ತಿಗೆದಾರರು ಭಾಗವಹಿಸಿದ್ದು, ಇಬ್ಬರು ಗುತ್ತಿಗೆದಾರರನ್ನು ತಾಂತ್ರಿಕವಾಗಿ ಅರ್ಹರೆಂದು ಟೆಂಡರ್ ಪರಿಶೀಲನಾ ಸಮಿತಿಯು ಘೋಷಿಸಿದ್ದು, ಅವರ ಆರ್ಥಿಕ ಬಿಡ್ಡನ್ನು ದಿನಾಂಕ: 013.12.2019 ರಂದು ತೆರೆಯಲಾಗಿರುತ್ತದೆ. ದರ ಸಂಧಾನ ಕೈಗೊಳ್ಳಲಾಗಿದೆ. ಆರ್ಥಿಕ ಬಿಡ್‌ನ ವಿವರಗಳು ಈ ಕೆಳಕಂಡಂತಿರುತ್ತದೆ.

ಟೆಂಡರ್ ಗಿಟ್ಟ ಮೊತ್ತ (ರೂ.)		14,87,99,065/–(ಲೋಕೋಪಯೋಗಿ ಇಲಾಖೆಯ 2018–19ನೇ ಸಾಲಿನ ದರದಂತೆ)	
ಕ್ರ ಸಂ	ಅರ್ಹಗುತ್ತಿಗೆದಾರರ ಹೆಸರು.	ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ.ಗಳು ಹಾಗೂ ಟೆಂಡರ್ ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ (ಶೇಕಡಾವಾರು ಹೆಚ್ಚಳ ಲೋಕೋಪಯೋಗಿ ಇಲಾಖೆಯ 2018–19).	ಬಿಬಿಎಂಪಿಯು ಶಿಫಾರಸ್ಸು ಮಾಡಿದ್ದ ಗುತ್ತಿಗೆದಾರರ ಸಂಧಾನಿತ ಮೊತ್ತ ರೂ. ಗಳು (ಸಾಲಿನ ಲೋಕೋಪಯೋಗಿ ಇಲಾಖೆಯ 2018–19ನೇ ಸಾಲಿನ ದರದಂತೆ).
1	Shri.Dhanjaya BS	ರೂ.17,11,15,588/– (+14.99% ಹೆಚ್ಚು)	ರೂ.15,61,64,000/– (+4.95% ಹೆಚ್ಚು)
2	Shri.Vishwanath KJ (Kumbanahalli Jawarehouwda Vishvanath)	ರೂ.17,55,82,114/– (+17.99% ಹೆಚ್ಚು)	-

d) ಅಧಿಕಾರಯುಕ್ತ ಸಮಿತಿಯ ನಿರ್ಣಯ:

ವಿವರವಾದ ಚರ್ಚೆಯ ನಂತರ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ Shri.Dhanjaya BS ರವರ ಬಿಡ್ಡನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ. 14,87,99,065/– ಗಳಿಗೆ ಹೋಲಿಸಿದಾಗ 4.95% ಅಧಿಕ ಇರುವ ಅಂದರೆ ರೂ. 15,61,64,000/–ಗಳ ಸಂಧಾನಿತ ಮೊತ್ತಕ್ಕೆ (ಅನ್ವಯವಾಗುವ ಎಲ್ಲ ಟ್ಯಾಕ್ಸ್ ಒಳಗೊಂಡಂತೆ) ಅನುಮೋದಿಸಲು ಮತ್ತು ಬಿಡ್‌ದಾರರು ಒಪ್ಪದ ಪಕ್ಷದಲ್ಲಿ ಮರುಟೆಂಡರ್ ಕರೆಯಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 4 : Improvements and development to areas around Kannahalli solid waste processing plant ಯೋಜನೆಯ ಅಂದಾಜು ಮೊತ್ತ ರೂ. 8.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಗೆ ಅನುಮೋದನೆ ನೀಡುವ ಬಗ್ಗೆ

Scanned by TapScanner

ನಅಇ 279 ಎಂಎನ್ ವೈ 2019

a) 2018–19ನೇ ಸಾಲಿನ ಆಯವ್ಯಯದಲ್ಲಿ ನವ ನಗರೋತ್ಥಾನ ಯೋಜನೆಯಡಿ ಅನುಮೋದನೆಗೊಂಡಿರುವ ರಾಜರಾಜೇಶ್ವರಿನಗರ ವಲಯದ ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅನುಮೋದಿತ ಕಾಮಗಾರಿಗಳ 3 ಪ್ಯಾಕೇಜ್ ಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಟೆಂಡರ್ ಅನುಮೋದನೆ ನೀಡುವಂತೆ ಸರ್ಕಾರವನ್ನು ಬಿ.ಬಿ.ಎಂ.ಪಿ ಆಯುಕ್ತರು ಕೋರಿರುತ್ತಾರೆ.

b) ಪ್ರಸ್ತಾವನೆಯಲ್ಲಿನ ಕಾಮಗಾರಿಗಳ 3 ಪ್ಯಾಕೇಜ್ ಪೈಕಿ Improvements and development to areas around Kannahalli solid waste processing plant (EE/KEN/TEND/10/2019-20, Dt: 21-06-2019) ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್ ವೈ 2018, ಬೆಂಗಳೂರು, ದಿನಾಂಕ: 20–09–2019ರಲ್ಲಿ ಅನುಬಂಧ 05 ರ ಕ್ರಮ ಸಂಖ್ಯೆ 206ರಲ್ಲಿ ರೂ.10 ಕೋಟಿ ಅನುದಾನವನ್ನು ಒದಗಿಸಲಾಗಿರುತ್ತದೆ.

c) ದಿನಾಂಕ: 23–07–2019ರಂದು ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಇ–ಪ್ರಕ್ಯೂರ್ಮೆಂಟ್ ಮೂಲಕ ದ್ವಿಲಕೋಟಿಯಂತೆ ಟೆಂಡರ್ ಕರೆದಿರುತ್ತಾರೆ. ಸದರಿ ಪ್ರಸ್ತಾವನೆಯ ತಾಂತ್ರಿಕ ಬಿಡ್ಡನ್ನು ದಿನಾಂಕ: 11–09–2019 ರಂದು ತೆರೆದಿದ್ದು, ತಾಂತ್ರಿಕ ಮೌಲ್ಯಮಾಪನ ಸಭೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಿದ್ದ 02 ಜನ ಗುತ್ತಿಗೆದಾರರ ಪೈಕಿ ಇಬ್ಬರೂ ಗುತ್ತಿಗೆದಾರರನ್ನು ಅರ್ಹರೆಂದು ಘೋಷಿಸಿ, ಅವರ ಆರ್ಥಿಕ ಬಿಡ್ಡನ್ನು ದಿನಾಂಕ: 03–12–2019 ರಂದು ಆರ್ಥಿಕ ಮೌಲ್ಯಮಾಪನ ಮತ್ತು ದರಸಂಧಾನ ಸಮಿತಿಯ ಮುಂದೆ ಸಲ್ಲಿಸಿದ್ದು ಬಿಡ್‌ನ ವಿವರಗಳು ಈ ಕೆಳಕಂಡಂತಿರುತ್ತದೆ.

ಕಾಮಗಾರಿಯ ಹೆಸರು:		Improvements and development to areas around Kannahalli solid waste processing plant (EE/KEN/TEND/10/2019-20, Dt: 21-06-2019)	
ಟೆಂಡರ್‌ಗಿಟ್ಟ ಮೊತ್ತ :		8,68,63,510.14 (2018–19ನೇ ಸಾಲಿನ ದರದಂತೆ)	
ಕ್ರ ಸಂ	ಅರ್ಹ ಗುತ್ತಿಗೆದಾರರ ಹೆಸರು	ಟೆಂಡರ್ ನಲ್ಲಿ ನಮೂದಿಸಿರುವ ಮೊತ್ತ (ರೂ. ಗಳಲ್ಲಿ)	ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಟೆಂಡರ್ ಪ್ರೀಮಿಯಂ
1	Sri.M.Rajesh (Shri.Nanjundeshwara Construction)	9,11,73,597.60 (ಸಂಧಾನಿತ ದರ) ಗುತ್ತಿಗೆದಾರರು ನಮೂದಿಸಿರುವ ಮೂಲ ಮೊತ್ತ ರೂ. 10,24,99,129.71	+4.96% ಹೆಚ್ಚು
2	2ನೇ ಗುತ್ತಿದಾರರ ವಿವರಗಳನ್ನು ಒದಗಿಸಿರುವುದಿಲ್ಲ.		

d) ಮೇಲ್ಕಾಣಿಸಿದ ಕೋಷ್ಟಕದಂತೆ ಎಲ್–1 ಗುತ್ತಿಗೆದಾರರಾದ Sri.M.Rajesh (Shri.Nanjundeshwara Construction) ರವರು ನಮೂದಿಸಿರುವ ಕನಿಷ್ಟ ಸಂಧಾನಿತ ಮೊತ್ತವು ರೂ. 9,11,73,597.60 ಗಳಾಗಿದ್ದು, ಸದರಿ ಮೊತ್ತವನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡಾ 4.96 % ರಷ್ಟು ಹೆಚ್ಚಾಗಿರುತ್ತದೆ. ಸದರಿ ಟೆಂಡರ್ ಮೊತ್ತವನ್ನು ಅನುಮೋದಿಸುವಂತೆ ಆಯುಕ್ತರು ಶಿಫಾರಸ್ಸು ಮಾಡಿ, ಅಧಿಕಾರಯುಕ್ತ ಸಮಿತಿಯ ಮುಂದೆ ಮಂಡಿಸಲು ಕೋರಿರುತ್ತಾರೆ.

